## ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಸೇವಾ ನಿಯಮಗಳ ಬಗ್ಗೆ.

720(873) ಶ್ರೀ ಕೃಷ್ಣಮೂರ್ತಿ ಎ.ಆರ್ (ಸಂತೇಮಾರಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಅಂಗನವಾಡಿ ಕೇಂದ್ರಗಳು ಇವೆ. ಇದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಎಷ್ಟು ಜನ ಇದ್ದಾರೆ ವಿವರ ನೀಡುವುದು?

ಆ) ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗೆ ನಿರ್ದಿಷ್ಟಪಡಿಸಲಾಗಿರುವ ವಿದ್ಯಾಭ್ಯಾಸ ಹಾಗೂ ವಯೋಮಿತಿಯ (ಕನಿಷ್ಠ ಹಾಗೂ ಗರಿಷ್ಠ) ವಿವರಗಳನ್ನು ನೀಡುವುದು: ಹಾಗೂ ಕಾರ್ಯಕರ್ತೆ ಹಾಗೂ ಸಹಾಯಕಿಯರ ಕರ್ತವ್ಯಗಳು ಏನು?

ಇ) ಕಾರ್ಯಕರ್ತೆ ಹಾಗೂ ಸಹಾಯಕಿಯನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಲು ಇರುವ ಮಾನದಂಡ ಏನು?

ಈ) ಸರ್ಕಾರಿ ಇಲಾಖಾ ನೌಕರರಂತೆಯೇ ಇವರುಗಳನ್ನು ವೊದಲು ಅಮಾನತ್ತುಗೊಳಿಸಬಹುದಾಗಿರುತ್ತದೆಯೇ? ನಂತರ ಇಲಾಖಾ ವಿಚಾರಣೆ ನಡೆಸಿ ಸೇವೆಯಿಂದ ವಿಮುಕ್ತಿಗೊಳಿಸಬಹುದೆ ವಿವರ ನೀಡುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 40301 ಅಂಗನವಾಡಿ ಕೇಂದ್ರಗಳು ಇವೆ. ಅವುಗಳಲ್ಲಿ 39992 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 40202 ಅಂಗನವಾಡಿ ಸಹಾಯಕಿಯರು ಕೆಲಸ ನಿರ್ವಹಿಸುತ್ತಿದ್ದಾರೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಕಾರ್ಯಕರ್ತೆಯ ಹುದ್ದೆಗೆ ನಿರ್ದಿಷ್ಟ ಪಡಿಸಲಾದ ಕನಿಷ್ಟ ವಿದ್ಯಾಭ್ಯಾಸ 8ನೇ ತರಗತಿ ಪಾಸ್ ಹಾಗೂ ವಯೋಮಿತಿ 18ರಿಂದ 44 ವರ್ಷಗಳು ಸಹಾಯಕಿಯರಿಗೆ ಯಾವುದೇ ವಿದ್ಯಾಭ್ಯಾಸ ನಿಗಧಿ ಪಡಿಸಿರುವುದಿಲ್ಲ ಹಾಗೂ ವಯೋಮಿತಿ ಕನಿಷ್ಟ 18 ವರ್ಷಗಳು ಮತ್ತು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ನಿರ್ವಹಿಸುವ ಕರ್ತವ್ಯ ವಿವರವನ್ನು ಅನುಬಂಧ- 2ರಲ್ಲಿ ಲಗತ್ತಿಸಿದೆ.

ಇ) ಗಂಭೀರವಾದ ಆಪಾದನೆಗಳಿದ್ದಲ್ಲಿ ವಿಚಾರಣೆ ನಡೆಸಿ, ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಕರ್ತವ್ಯದಿಂದ ವಿಮುಕ್ತಿಗೊಳಿಸಲು ಅವಕಾಶವಿದೆ.

ಈ) ಕಾರ್ಯಕರ್ತೆ ಹಾಗೂ ಸಹಾಯಕಿಯರು ಗೌರವ ಸೇವೆಯ ಮೇಲೆ ಕರ್ತವ್ಯ ನಿರ್ವಹಿಸುವ ಕಾರಣ ಸರ್ಕಾರಿ ನೌಕರರಿಗೆ ಮಾಡುವಂತೆ ಸೇವೆಯಲ್ಲಿ ಅಮಾನತ್ತಿನಲ್ಲಿಡಲು ಅವಕಾಶವಿರುವುದಿಲ್ಲ.

**Annexure - 1**

| Sl. No. | Name of the District | No. of AWWS Sanctinoed | No. of AWWS In Position | No.of AWHs Sanctinoed | No.of AWHs In position |
|---|---|---|---|---|---|
| 1. | Bangalore (R) | 1891 | 1887 | 1891 | 1889 |
| 2. | Bangalore (U) | 1192 | 1185 | 1192 | 1191 |
| 3. | Belgaum | 3773 | 3718 | 3773 | 3771 |
| 4. | Bellary | 1372 | 1362 | 1372 | 1371 |
| 5. | Bidar | 1151 | 1139 | 1151 | 1151 |
| 6. | Bijapur | 1301 | 1294 | 1301 | 1296 |
| 7. | Bagalkot | 1366 | 1357 | 1366 | 1361 |
| 8. | Chickmagalur | 1226 | 1181 | 1226 | 1186 |
| 9. | Chitradurga | 1336 | 1331 | 1336 | 1335 |
| 10. | Davanagere | 1262 | 1259 | 1262 | 1261 |
| 11. | Dakshina Kannada | 1775 | 1753 | 1775 | 1775 |
| 12. | Udupi | 1027 | 1007 | 1027 | 1018 |
| 13. | Dharwad | 806 | 803 | 806 | 806 |
| 14. | Gadag | 835 | 824 | 835 | 824 |
| 15. | Haveri | 1249 | 1246 | 1249 | 1248 |
| 16. | Gulbarga | 2350 | 2347 | 2350 | 2349 |
| 17. | Hassan | 1603 | 1588 | 1603 | 1592 |
| 18. | Kodagu | 692 | 685 | 692 | 691 |
| 19. | Kolar | 2361 | 2340 | 2361 | 2359 |
| 20. | Mandya | 1655 | 1642 | 1655 | 1654 |
| 21. | Mysore | 1930 | 1927 | 1930 | 1929 |
| 22. | Raichur | 1308 | 1304 | 1308 | 1308 |
| 23. | Koppal | 893 | 884 | 893 | 892 |
| 24. | Chamarajanagar | 1085 | 1084 | 1085 | 1084 |
| 25. | Shimoga | 1323 | 1317 | 1323 | 1323 |
| 26. | Tumkur | 2337 | 2332 | 2337 | 2336 |
| 27. | Karwar | 1202 | 1196 | 1202 | 1202 |
| | Total | 40301 | 39992 | 40301 | 40202 |

## ಅನುಬಂಧ-2

### ಅಂಗನವಾಡಿ ಕಾರ್ಯಕರ್ತೆಯರ ಕರ್ತವ್ಯಗಳು

1) 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲಾ ಮಕ್ಕಳ ತೂಕವನ್ನು ಕಂಡುಕೊಂಡು ಪ್ರತಿ ತಿಂಗಳು ದಾಖಲೆ ಮಾಡಿಕೊಳ್ಳಬೇಕು.

2) ಸಮುದಾಯವನ್ನು ಸರ್ವೆ ಮಾಡುವುದು ಮತ್ತು ಫಲಾನುಭವಿಗಳ ಪಟ್ಟಿ ಮಾಡುವುದು ಸರ್ವೆ ನಡೆಸುವ ಮೂಲಕ 6 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳು, ಗರ್ಭಿಣಿ ಸ್ತ್ರೀಯರು ಹಾಲುಣಿಸುವ ತಾಯಂದಿರು ಎಷ್ಟು ಮಂದಿ ಇದ್ದಾರೆಂಬುದನ್ನು ಕಂಡುಕೊಂಡು ಅವರಲ್ಲಿ ತೊಂದರೆಯಲ್ಲಿರುವವರನ್ನು ಪತ್ತೆ ಹಚ್ಚಿ ಅಂಥವರ ಬಗ್ಗೆ ಆರೋಗ್ಯ ಸಿಬ್ಬಂದಿಗೆ ತಿಳಿಸಬೇಕು. ಕುಟುಂಬಗಳ ಸಂಖ್ಯೆ, ಕುಟುಂಬದ ಸದಸ್ಯರ ಸಂಖ್ಯೆ ಮತ್ತು ಕುಟುಂಬದ ವರಮಾನಕ್ಕೆ ಸಂಬಂಧಿಸಿದಂತೆ ಅಂಕಿ ಅಂಶಗಳನ್ನು ಪಡೆದುಕೊಳ್ಳಬೇಕು. ಜನನ-ಮರಣ ಅಂಕಿ ಅಂಶಗಳನ್ನು ಅದರಲ್ಲೂ ಮುಖ್ಯವಾಗಿ ಹೊಸ ಜನನ ಹಾಗೂ ಮರಣಗಳನ್ನು ದಾಖಲೆ ಮಾಡಿಕೊಳ್ಳಬೇಕು.

3) 3 ರಿಂದ 6 ವರ್ಷದ ಒಳಗಿನ ಮಕ್ಕಳಿಗೆ ಅಂಗನವಾಡಿಯಲ್ಲಿ ರೂಢಿಗತವಲ್ಲದ ಶಾಲಾಪೂರ್ವ ಶಿಕ್ಷಣವನ್ನೊದಗಿಸುವುದಕ್ಕೆ ಏರ್ಪಾಡು ಮಾಡುವುದು.

4) ತಾಯಂದಿರಿಗೆ ಪೌಷ್ಟಿಕ ಆಹಾರ ಮತ್ತು ಆರೋಗ್ಯ ಕುರಿತು ತಿಳುವಳಿಕೆ ಕೊಡುವುದು.

5) ಮನೆಗಳಿಗೆ ಭೇಟಿ ನೀಡುವುದು ಮತ್ತು ಮುಖ್ಯವಾಗಿ ತೊಂದರೆಯಲ್ಲಿರುವ ಮಗುವಿಗೆ ಸಂಬಂಧಿಸಿದಂತೆ ತಂದೆ-ತಾಯಿಯರಿಗೆ ತಿಳುವಳಿಕೆ ನೀಡುವುದು. ಹೀಗೆ ಮಾಡಿದರೆ ಮಗುವಿನ ತಾಯಿಗೆ ಮಗುವಿನ ಬೆಳವಣಿಗೆಯಲ್ಲಿ ಪರಿಣಾಮಕಾರಿ ಪಾತ್ರ ವಹಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

6) ಈ ಕಾರ್ಯಕ್ರಮವನ್ನು ನಡೆಸಲು ಸಮೂದಾಯದ ಬೆಂಬಲವನ್ನು ಪಡೆಯುವುದು ಮತ್ತು ಸಮುದಾಯವು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡುವುದು.

7) ರೋಗ ನಿರೋಧಕ ಚುಚ್ಚುಮದ್ದು, ಆರೋಗ್ಯ ತಪಾಸಣೆ, ಮಾಹಿತಿ ಸೇವೆಗಳು ಹಾಗೂ ಆರೋಗ್ಯ ಶಿಕ್ಷಣ ಮುಂತಾದ ಸಮಗ್ರ ಶಿಶು ಅಭಿವೃದ್ಧಿ ಸೇವಾ ಕಾರ್ಯಕ್ರಮದಲ್ಲಿನ ಆರೋಗ್ಯ ಸೇವೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯವರಿಗೆ ನೆರವಾಗುವುದು.

8) ನಿಗದಿಪಡಿಸಿರುವ ರಿಜಿಸ್ಟರುಗಳನ್ನು ಮತ್ತು ದಾಖಲೆಗಳನ್ನು ಇಟ್ಟುಕೊಂಡಿರುವುದು.

9) ಗ್ರಾಮದಲ್ಲಿ ನಡೆದ ಯಾವುದೇ ಘಟನೆಯ ಸಂಬಂಧದಲ್ಲಿ ಇನ್ನೂ ಹೆಚ್ಚಿನ ಯಾವುದೇ ಗಮನ ನೀಡುವ ಅವಶ್ಯವಿರುವಂತ ಪ್ರಕರಣಗಳನ್ನು ಶಿಶು ಅಭಿವೃದ್ಧಿಯೋಜನಾ ಕಛೇರಿಗೆ ಅಥವಾ ಮೇಲ್ವಿಚಾರಕಿಯರಿಗೆ ವರದಿ ಮಾಡುವುದು.

10) ಗ್ರಾಮದಲ್ಲಿರುವ ಪಂಚಾಯಿತಿ, ಮಹಿಳಾ ಮಂಡಲ ಮುಂತಾದ ಸಂಸ್ಥೆಗಳೊಂದಿಗೆ ಹಾಗೂ ಶಾಲಾ ಶಿಕ್ಷಕರು, ದಾದಿ ಮುಂತಾದ ವ್ಯಕ್ತಿಗಳೊಂದಿಗೆ ಸಂಪರ್ಕವಿಟ್ಟುಕೊಳ್ಳುವುದು

ಮತ್ತು ಕಾರ್ಯಕ್ರಮವನ್ನು ನಡೆಸುವಲ್ಲಿ ಅವರ ಬೆಂಬಲವನ್ನು ಪಡೆಯುವುದು ಹಾಗೂ ಅವರು ಅದರಲ್ಲಿ ಭಾಗಿಗಳಾಗುವಂತೆ ಮಾಡುವುದು.

11) ಮಕ್ಕಳಿಗೆ (6 ತಿಂಗಳಿಂದ 6 ವರ್ಷ ವಯಸ್ಸಿನ) ಗರ್ಭಿಣಿ ಸ್ತ್ರೀಯರಿಗೆ ಮತ್ತು ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರವನ್ನೊದಗಿಸುವುದಕ್ಕೆ ಏರ್ಪಾಡು ಮಾಡುವುದು.

ಅಂಗನವಾಡಿ ಸಹಾಯಕಿಯರ ಕರ್ತವ್ಯಗಳು:-

1) ಅಡಿಗೆ ಮಾಡಿ ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಬಡಿಸುತ್ತಾರೆ.

2) ಅಂಗನವಾಡಿಯ ಆವರಣವನ್ನು ಪ್ರತಿದಿನವು ಸ್ವಚ್ಛವಾಗಿಡುತ್ತಾರೆ ಮತ್ತು ಅಂಗನವಾಡಿಗೆ ನೀರು ತರುತ್ತಾರೆ.

3) ಚಿಕ್ಕಮಕ್ಕಳು ಶುಚಿಯಾಗಿರುವಂತೆ ನೋಡಿಕೊಳ್ಳುತ್ತಾರೆ.

4) ಚಿಕ್ಕಮಕ್ಕಳನ್ನು ಅಂಗನವಾಡಿ ಕೇಂದ್ರಗಳಿಗೆ ಕರೆತರುವುದು.

ಜಲಾನಯನ ಅಭಿವೃದ್ಧಿ ಇಲಾಖೆಯ ಕಾರ್ಯವೈಖರಿ

721(872) ಶ್ರೀ ಎ.ಆರ್. ಕೃಷ್ಣಮೂರ್ತಿ(ಸಂತೇಮಾರಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2000-01 ಸಾಲಿನಿಂದ ಪ್ರಾರಂಭಗೊಂಡಿರುವ ಮೈಸೂರು, ಕೊಡಗು ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳ ಪದನಾಮ ಸಹಿತ ವಿವರ ನೀಡುವುದು. ಈ ಅಧಿಕಾರಿಗಳು ಸಲ್ಲಿಸಿರುವ ದಿನಚರಿಯ ಮಾಹಿತಿ ನೀಡುವುದು.

ಆ) ಸದರಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು? ವಿವರ ನೀಡುವುದು?

ಇ) ಆ ಹುದ್ದೆಗಳಿಗೆ ಪ್ರಭಾರ ಅಧಿಕಾರಿಗಳು ನೇಮಕರಾಗಿರುತ್ತಾರೆಯೇ?

ಈ) ಪ್ರಭಾರಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ: ನಿರ್ವಹಿಸಿರುವ ಅಧಿಕಾರಿಗಳ ಪದನಾಮ ಹಾಗೂ ಮೂಲ ಹುದ್ದೆಯ ಸಹಿತ ಹಾಗೂ ಪ್ರಭಾರೆಯಾಗಿ ನೇಮಕ ಮಾಡಿದ ಪ್ರಾಧಿಕಾರದ ಆದೇಶ ಸಂಖ್ಯೆ ದಿನಾಂಕ, ನಿರ್ವಹಿಸಿದ ಅವಧಿ ಮತ್ತು ಈ ವಿಷಯದಲ್ಲಿ ಖರ್ಚಾಗಿರುವ ಹಣದ ಬಗ್ಗೆ ಪೂರ್ಣ ವಿವರ ನೀಡುವುದು?

ಶ್ರೀ ವಿ.ಎಸ್. ಕೌಜಲಗಿ(ಕೃಷಿ ಸಚಿವರು) :

ಅ) ಮೈಸೂರು ಮತ್ತು ಕೊಡಗು ಜಿಲ್ಲೆಗಳ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ ಪಟ್ಟಿ ಲಗತ್ತಿಸಿದೆ. (ಅನುಬಂಧ-1).

2000-01 ಸಾಲಿನಿಂದ ಇದುವರೆಗೆ ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ಸಕಾಲದಲ್ಲಿ ತಮ್ಮ ದಿನಚರಿಗಳನ್ನು ಸಂಬಂಧಿಸಿದ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಉಳಿದ ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ನಿಯಂತ್ರಣಾಧಿಕಾರಿಗಳಾದ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳಿಗೆ ಸಲ್ಲಿಸಿರುತ್ತಾರೆ.